# ವಿಷಯ : ಕನ್ನಡ ತೃತೀಯ ಭಾಷೆ

# ಪ್ರಶ್ನೆ ಪತ್ರಿಕೆಯ ವಿನ್ಯಾಸ

**ಗರಿಷ್ಠ ಅಂಕಗಳು : 80** **ಗರಿಷ್ಠಾವಧಿ : 2-30 ಗಂಟೆಗಳು**

**ಪ್ರಶ್ನೆ ಪತ್ರಿಕೆ ಅಂಕವಿತರಣೆ:**ಗದ್ಯ-25, ಪದ್ಯ-24, ಪಠ್ಯಪೋಷಕ ಅಧ್ಯಯನ-04, ವ್ಯಾಕರಣ-12, ಗಾದೆ-03 ವಾಕ್ಯರಚನೆ-23, ಅಪಠಿತ ಗದ್ಯ-4 = **ಒಟ್ಟು : 80.**

**ವಿಷಯಾನುಸಾರ ಪ್ರಾಮುಖ್ಯತೆ :**

| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು |
|---|---|---|
| ಗದ್ಯ | 31 | 25 |
| ಪದ್ಯ | 30 | 24 |
| ಪಠ್ಯ ಪೋಷಕ ಅಧ್ಯಯನ | 05 | 04 |
| ವ್ಯಾಕರಣ | 15 | 12 |
| ವಾಕ್ಯ ರಚನೆ | 14 | 11 |
| ಅಪಠಿತಗದ್ಯ | 05 | 04 |
| **ಒಟ್ಟು** | **100** | **80** |

**ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ :**

| | | |
|---|---|---|
| ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 12 ಪ್ರಶ್ನೆಗಳು | 12X1 = 12 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 14 ಪ್ರಶ್ನೆಗಳು | 14X1 = 14 |
| 3-4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 10 ಪ್ರಶ್ನೆಗಳು | 10X2 = 20 |
| 5-6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 6 ಪ್ರಶ್ನೆಗಳು | 6 X3 = 18 |
| 5-6 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2 X4 = 08 |
| ಪ್ರಬಂಧ & ವಿಸ್ತಾರವಾಗಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2 X4 = 08 |
| **ಒಟ್ಟು** | **46 ಪ್ರಶ್ನೆಗಳು** | **80 ಅಂಕಗಳು** |

| **ಪ್ರಶ್ನೆಗಳ ಸ್ವರೂಪ** | **ಗದ್ಯ** | **ಪದ್ಯ** | **ಪೋಷಕ ಅಧ್ಯಯನ** | **ವ್ಯಾಕರಣ** | **ವಾಕ್ಯರಚನೆ** | **ಅಪಠಿತಗದ್ಯ** | **ಒಟ್ಟು** |
|---|---|---|---|---|---|---|---|
| ಬಹು ಆಯ್ಕೆ | | | | 12 | | | 12 |
| ಅಪಠಿತ ಗದ್ಯ | | | | | | 04 | 04 |
| ಒಂದು ವಾಕ್ಯದ ಉತ್ತರಗಳು | 05 | 03 | 02 | | | | 10 |
| ಮೂರು ನಾಲ್ಕು ವಾಕ್ಯಗಳ ಉತ್ತರಗಳು | 10 | 08 | 02 | | | | 20 |
| ಐದಾರು ವಾಕ್ಯಗಳ ಉತ್ತರಗಳು - ಸಂದರ್ಭಗಳು | 03 | 03 | | | | | 06 |
| ಕವಿ ಕೃತಿ ವಿಚಾರ | 03 | 03 | | | | | 06 |
| ಗಾದೆಗಳು | | | | | 03 | | 03 |
| ಕಂಠಪಾಠ | | 03 | | | | | 03 |
| ಎಂಟು/ಹತ್ತು ವಾಕ್ಯಗಳ ಉತ್ತರಗಳು | 04 | 04 | | | | | 08 |
| ಪತ್ರ | | | | | 04 | | 04 |
| ಪ್ರಬಂಧ | | | | | 04 | | 04 |
| **ಒಟ್ಟು** | **25** | **24** | **04** | **12** | **11** | **04** | **80** |

# ಹತ್ತನೇ ತರಗತಿ ಮಾದರಿ ಪ್ರಶ್ನೆ ಪತ್ರಿಕೆ (1)
# ಕನ್ನಡ ತೃತೀಯ ಭಾಷೆ
# ಪ್ರಶ್ನೆ ಪತ್ರಿಕೆ

**ಗರಿಷ್ಠ ಅಂಕ : ೮೦** **ಪರಮಾವಧಿ : 2-30 ಗಂಟೆಗಳು**

**ಸೂಚನೆಗಳು :**

- ಪ್ರಶ್ನೆ ಪತ್ರಿಕೆಯು ಎ, ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ.
- ವಿಭಾಗ 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 53 ಅಂಕಗಳು
- ವಿಭಾಗ 'ಬಿ' ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು 12 ಅಂಕಗಳು
- ವಿಭಾಗ 'ಸಿ' ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ 15 ಅಂಕಗಳು
- ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಬೇಕು
- ವಸ್ತುನಿಷ್ಠ ಪ್ರಶ್ನೆಗಳಿಗೆ, ಹೊಡೆದು, ಅಳಿಸಿ, ಕೆರೆದು ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
- ಪೆನ್ಸಿಲ್ ಬಳಸಿ ಬರೆದ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

## ಭಾಗ – 'ಎ'

## ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ) 53 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದ ಉತ್ತರವನ್ನು ಬರೆಯಿರಿ.** 10X1=10

1. ಕರ್ನಾಟಕದ ವಿಶಿಷ್ಟ ಗುಣ ಯಾವುದೆಂದು ಜಿ.ಪಿ ರಾಜರತ್ನಂ ಅವರು ತಿಳಿಸಿದ್ದಾರೆ?
2. ಈ ದೇಶದ ಪ್ರಗತಿ ಯಾವಾಗ ಸಾಧ್ಯವಾಗುತ್ತದೆ ಎಂದು ಬಿ. ಆರ್. ಲಕ್ಷಣರಾವ್ ತಿಳಿಸಿದ್ದಾರೆ?
3. ಮಿತ್ರರು ಗೊತ್ತುಮಾಡಿಕೊಂಡಿದ್ದ ಸ್ಥಳವನ್ನು ಬಿಟ್ಟು ಗೊರೂರರು ಆಚೆ, ಈಚೆ ಹೊರಟು ಹೋದದ್ದೇಕೆ?
4. ಎಲ್ಲರೂ ಏನೆಂದು ಪಣ ತೊಡಬೇಕೆಂದು ನಿಸಾರ್ ಅಹಮದ್ ಹೇಳಿದ್ದಾರೆ?
5. ಗುಂಡಿನೇಟಿಗೆ ಬಲಿಯಾಗಿ ಬಿದ್ದಿದ್ದ ರಾಮಸಿಂಗನಿಗೆ ತಾಯಿಯು ಹೇಳಿದ ಮಾತುಗಳಾವುವು?
6. ಮನುಜಲೋಕವನ್ನು ಸ್ವರ್ಗವನ್ನಾಗಿ ಪರಿವರ್ತಿಸಿದವರು ಯಾರೆಂದು ಚೆನ್ನವೀರ ಕಣವಿ ಹೇಳಿದ್ದಾರೆ?
7. ಕಿಷ್ಕಿಂಧೆಯ ವಾನರ ಸ್ತ್ರೀಯರ ದೃಷ್ಟಿಯಲ್ಲಿ ಸೀತೆಯು ಸುಂದರಿಯೇನಲ್ಲ ಏಕೆ?
8. ಕಿತ್ತೂರು ರಾಣಿ ಚೆನ್ನಮ್ಮನು ಯಾವ ಮಾತುಗಳಿಂದ ಹೋರಾಟಗಾರರನ್ನು ಹುರಿದುಂಬಿಸಿದಳು?
9. ಈಶ್ವರ .ಎಂ. ಕಂಬಳಿಯವರು ತಿಳಿಸಿರುವಂತೆ ಬಿಸಿಲು ಸೀಮೆಯ ಜನರ ಸ್ವಭಾವ ಎಂತಹದು?
10. ರೊಟ್ಟಿತಿಂದ ಗಿಡುಗನು ರೆಕ್ಕೆಯನ್ನು ಬಡಿದುಕೊಳ್ಳುತ್ತಾ ಸಾವನ್ನಪ್ಪಿತು ಏಕೆ?

**ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು, ಮೂರು ವಾಕ್ಯಗಳ ಉತ್ತರಗಳನ್ನು ಬರೆಯಿರಿ.** 10X2=20

11. ಜಿ. ಪಿ. ರಾಜರತ್ನಂ ಅವರು ಹೇಳಿರುವ ಕರ್ನಾಟಕದ ಲಕ್ಷಣಗಳಾವುವು ?
12. ಐಪಿಎಲ್ ಕ್ರೀಡಾಸ್ಪರ್ಧೆಯಲ್ಲಿ ಅನಿಲ್ ಕುಂಬ್ಳೆಯವರ ಸಾಧನೆಯನ್ನು ತಿಳಿಸಿರಿ.

13. ಭಾರತ ಸರ್ಕಾರವು ಅನಿಲ್ ಕುಂಬ್ಳೆಯರಿಗೆ ನೀಡಿದ ಪ್ರಶಸ್ತಿಗಳಾವುವು?/ಕುಂಬ್ಳೆಯವರು ಭಾರತ ಸರ್ಕಾರದಿಂದ ಪಡೆದ ಪ್ರಶಸ್ತಿಗಳಾವುವು?

14. ಅಧಿಕಾರಿಗಳ ಎಂತಹ ಆಜ್ಞೆಗಳನ್ನು ಪಾಲಿಸಲು ತಾವು ಸಿದ್ಧವೆಂದು ಸೋಮಣ್ಣನು ಕುಲಕರ್ಣಿಗೆ ಹೇಳಿದನು?

15. ರಾಮಸಿಂಗನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

16. ಸ್ವಾತಿ ಮಳೆಯಿಂದಾಗುವ ಲಾಭವನ್ನು ಜನಪದರು ಹೇಗೆ ವರ್ಣಿಸಿದ್ದಾರೆ?

17. ಜನಪದರು ಮಳೆರಾಯನನ್ನು ಏನೆಂದು ಕೇಳಿಕೊಂಡಿದ್ದಾರೆ?

18. ಮನಸ್ಸನ್ನು ಶುದ್ಧವಾಗಿಡಲು ಯಾವ ವಿಧಾನಗಳನ್ನು ಅನುಸರಿಸಬೇಕೆಂದು ಪುರಂದರ ದಾಸರು ತಿಳಿಸಿದ್ದಾರೆ?

19. ಒಂದೇ ಗೇಣಿನ ಅಂತರದಲ್ಲಿ ಮುಕ್ತಿಯನ್ನು ಪಡೆಯುವುದು ಹೇಗೆಂದು ಪುರಂದರ ದಾಸರು ತಿಳಿಸಿದ್ದಾರೆ?

20. ಭಟ, ಮಂತ್ರಿ, ದೊರೆ, ಯೋಗಿ ಆಗುವವರಿಗೆ ಇರಬೇಕಾದ ಸಾಮರ್ಥ್ಯಗಳಾವುವುವೆಂದು ಪುಲಿಗೆರೆ ಸೋಮನಾಥನು ತಿಳಿಸಿದ್ದಾನೆ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಾಕ್ಯಗಳಲ್ಲಿ ಬರೆಯಿರಿ.** 2x3=6

21. "ಈಗ ನೀವು ನನ್ನ ವಶವಾದಿರಿ, ನಾನು ನಿಮ್ಮನ್ನು ಕೈ ಬಿಡುವಂತಿಲ್ಲ."

22. "ಸ್ವಸ್ವಭಾವ ಚಹರೆ ಬೇರೆ ತಾಯ ಬಸಿರು ಒಂದೆ"

**ಈ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ವಾಕ್ಯಗಳಲ್ಲಿ ಬರೆಯಿರಿ.** 2x3=6

23. ಅ.ರಾ.ಮಿತ್ರ

24. ಚೆನ್ನವೀರ ಕಣವಿ.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಮಾಡಿರಿ.** 1x3=3

25. ಅಕ್ಷರ__________________
_____________ಮಾಯಾ___
____________ನಿನಗೆ______
__________________ರೂಪ

**ಅಥವಾ**

____ಉಜ್ಜಿದರೆ____________
ಸರ್ವ__________________
___________ನೀ________
_________________ಸಮಸ್ತ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳ ಉತ್ತರಗಳನ್ನು ಬರೆಯಿರಿ.** 2x4=8

26. ಶಿವಾಜಿಯು ಬೆಳವಡಿ ಮಲ್ಲಮ್ಮನೊಡನೆ ರಾಜಿಮಾಡಿಕೊಂಡ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

**ಅಥವಾ**

ಕೆಳದಿ ಚೆನ್ನಮ್ಮನು ಬಲಾಢ್ಯ ಮೊಗಲ್ ಚಕ್ರವರ್ತಿ ಔರಂಗಜೇಬನನ್ನು ಸೋಲಿಸಿದ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

27. ಚಿಂತೆಯು ಬಿಡಲಾರದ ಬಂಧನ ಎಂಬ ಭಾವವು ಅಂಬಿಗರ ಚೌಡಯ್ಯನ ವಚನಗಳಲ್ಲಿ ಹೇಗೆ ವ್ಯಕ್ತವಾಗಿದೆ? ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

**ಅಥವಾ**

ಲೋಕದ ಜನ ಬದುಕಿನ ಚಿಂತೆಯಲ್ಲೇ ಮುಳುಗಿ ಹೋಗುವ ಪರಿಯನ್ನು ಅಂಬಿಗರ ಚೌಡಯ್ಯನು ತನ್ನ ವಚನಗಳಲ್ಲಿ ಹೇಗೆ ವ್ಯಕ್ತ ಪಡಿಸಿದ್ದಾನೆ? ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

## ಭಾಗ – 'ಬಿ'

## ಅನ್ವಯಿಕ ವ್ಯಾಕರಣ – 12 ಅಂಕಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಕೆಳಗೆ ಕೊಟ್ಟಿರುವ ನಾಲ್ಕು ಪರ್ಯಾಯಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**

12X1=12

28. **ಈ ಕೆಳಗಿನ ಅಕ್ಷರಗಳಲ್ಲಿ ಮಹಾಪ್ರಾಣಾಕ್ಷರಗಳಿವು:**

(ಎ) ಆಈಊಏಓ (ಸಿ) ಯರಲವಶ

(ಬಿ) ಙಞಣನಮ (ಡಿ) ಘಝಢಧಭ

29. **ಹನುಮನುದಿಸಿದ ಕನ್ನಡನಾಡಿನಲ್ಲಿ ರಾಜ್ಯೋತ್ಸವವು ಅಕ್ಕರೆಯಿಂದ ಮತ್ತೆ ಮತ್ತೆ ಬರುತ್ತದೆ.–ಈ ವಾಕ್ಯದಲ್ಲಿರುವ 'ಗುಣಸಂಧಿ' ಪದ:**

(ಎ) ಹನುಮನುದಿಸಿದ (ಸಿ) ರಾಜ್ಯೋತ್ಸವವು

(ಬಿ) ಕನ್ನಡನಾಡಿನಲ್ಲಿ (ಡಿ) ಅಕ್ಕರೆಯಿಂದ

30. **ಪ್ರಾತಿಪದಿಕವೆಂದರೆ:**

(ಎ) ನಾಮಪದದ ಮೂಲರೂಪ (ಸಿ) ಕ್ರಿಯಾಪದದ ಮೂಲರೂಪ

(ಬಿ) ನಾಮವಿಭಕ್ತಿ ಪ್ರತ್ಯಯ (ಡಿ) ಕ್ರಿಯಾಪ್ರಕೃತಿ

31. **'ಮುಕ್ಕಣ್ಣು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :**

(ಎ) ಬಹುವ್ರೀಹಿ (ಸಿ) ದ್ವಿಗು

(ಬಿ) ಗಮಕ (ಡಿ) ಅಂಶಿ

32. **'ಉಪಮಾನವೇ ಉಪಮೇಯ' ಎಂದು ಹೇಳುವ ಅಲಂಕಾರ:**

(ಎ) ದೃಷ್ಟಾಂತ (ಸಿ) ಯಮಕ

(ಬಿ) ಉಪಮಾ (ಡಿ) ರೂಪಕ

33. **'ಅನ್ನು' ಎನ್ನವುದು :**

(ಎ) ಸಪ್ತಮೀ ವಿಭಕ್ತಿ ಪ್ರತ್ಯಯ (ಸಿ) ಕಾಲಸೂಚಕ ಪ್ರತ್ಯಯ

(ಬಿ) ಆಖ್ಯಾತ ಪ್ರತ್ಯಯ (ಡಿ) ದ್ವಿತೀಯಾ ವಿಭಕ್ತಿ ಪ್ರತ್ಯಯ

34. **'ಒಳ್ಳೆಯ ವ್ಯಾಪಾರಿಯಾದ ರಾಮನಿಗೆ ಹಲವು ದೇಶಗಳ ಪರಿಚಯವಿದೆ'.– ಈ ವಾಕ್ಯದಲ್ಲಿರುವ ಅನ್ವರ್ಥನಾಮ :**

(ಎ) ದೇಶ (ಸಿ) ರಾಮ

(ಬಿ) ವ್ಯಾಪಾರಿ (ಡಿ) ಹಲವು

೩೫. **'ಮಿತ್ರ' ಪದದ ವಿರುದ್ಧ ಪದ :**

(ಎ) ಅಮಿತ್ರ (ಸಿ) ಶತ್ರು

(ಬಿ) ಸ್ನೇಹಿತ (ಡಿ) ಗೆಳಯ

೩೬. **ಪ್ರಧಾನ ವಾಕ್ಯದಲ್ಲಿಯ ಅನೇಕ ಉಪವಾಕ್ಯಗಳ ಕೊನೆಯಲ್ಲಿ ಬಳಸುವ ಲೇಖನ ಚಿಹ್ನೆ:**

(ಎ) ಪ್ರಶ್ನಾರ್ಥಕ (ಸಿ) ಅರ್ಧವಿರಾಮ

(ಬಿ) ಪೂರ್ಣವಿರಾಮ (ಡಿ) ಅಲ್ಪವಿರಾಮ

೩೭. **ತೆಂಕಣವೆಂದರೆ:**

(ಎ) ದಕ್ಷಿಣ (ಸಿ) ಪೂರ್ವ

(ಬಿ) ಉತ್ತರ (ಡಿ) ಪಶ್ಚಿಮ

೩೮. **: ಮಗು ಪದದ ಬಹುವಚನರೂಪ:**

(ಎ) ಮಗುಗಳು (ಸಿ)ಮಕ್ಕಳು

(ಬಿ) ಮಗುವಂದಿರು (ಡಿ) ಮಕ್ಕಳಂದಿರು

೩೯. **ದ್ವಿರುಕ್ತಿ ಪದಕ್ಕೆ ಉದಾಹರಣೆ ಇದು :**

(ಎ) ಪಟಪಟ (ಸಿ) ಲಾಗಹಾಕು

(ಬಿ) ನಡೆನಡೆ (ಡಿ) ಆಟಪಾಠ

# ಭಾಗ – 'ಸಿ'

## ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ 15 ಅಂಕಗಳು

೪೦. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಸ್ವಾರಸ್ಯ ಸಹಿತ ವಿಸ್ತರಿಸಿ ಬರೆಯಿರಿ.** **1X3=3**

- ಹಾಸಿಗೆ ಇದ್ದಷ್ಟು ಕಾಲು ಚಾಚು.
- ಚಿಂತೆಯೇ ಮುಪ್ಪು; ಸಂತೋಷವೇ ಯೌವನ.
- ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ.

**ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1X4=4**

ಭಾರತೀಯರ ಸ್ವಾಭಿಮಾನದ ಸಂಕೇತ ಹಾಗೂ ದೇಶ ಭಕ್ತಿಯ ದ್ಯೋತಕವೇ ಆಗಿರುವ ನಮ್ಮ ರಾಷ್ಟ್ರಧ್ವಜವು, ಕೇಸರಿ, ಬಿಳಿ, ಹಸಿರು ಬಣ್ಣಗಳಿಂದ ಕೂಡಿರುವ ತ್ರಿವರ್ಣಧ್ವಜ. ಈ ಧ್ವಜದ ಅಗಲ ಮತ್ತು ಉದ್ದವು 2:3ರ ಅನುಪಾತದಲ್ಲಿದೆ. ಮಾನ್ಯ ಪಿಂಗಾಳಿ ವೆಂಕಯ್ಯನವರು ಇದನ್ನು ವಿನ್ಯಾಸಗೊಳಿಸಿದವರು.

ತ್ರಿವರ್ಣಧ್ವಜದಲ್ಲಿರುವ ಕೇಸರಿ ಬಣ್ಣವು, ಧೈರ್ಯ, ತ್ಯಾಗ ಮತ್ತು ದೇಶಭಕ್ತಿಯ ಪ್ರತೀಕವಾಗಿದೆ. ನಡುವಿನ ಬಿಳಿಯ ಬಣ್ಣವು ಶಾಂತಿ ಮತ್ತು ಸೌಹಾರ್ದತೆಯ ಸಂಕೇತವೆನಿಸಿದೆ. ಹಸಿರು ಬಣ್ಣವು ಭೂದೇವಿಯ ಪ್ರತೀಕವಾಗಿದ್ದು, ಸಮೃದ್ಧಿ ಮತ್ತು ನಂಬಿಕೆಯನ್ನು ಪ್ರತಿನಿಧಿಸುತ್ತದೆ. ಮಧ್ಯದಲ್ಲಿರುವ ಅಶೋಕ ಚಕ್ರವು ನೀಲಿ ಬಣ್ಣದಿಂದ ಕೂಡಿದ್ದು ಪ್ರಗತಿಯ ಸಂಕೇತವೇ ಆಗಿದೆ. ದೇಶದ ಬೆಳವಣಿಗೆ, ಶಿಸ್ತು, ನ್ಯಾಯ, ನಿರಂತರತೆಯನ್ನು ಇದು ಸೂಚಿಸುತ್ತದೆ.

**ಪ್ರಶ್ನೆಗಳು:**

41. ನಮ್ಮ ರಾಷ್ಟ್ರಧ್ವಜವನ್ನು ವಿನ್ಯಾಸಗೊಳಿಸಿದವರು ಯಾರು?

42. ತ್ರಿವರ್ಣಧ್ವಜದ ಅಗಲ ಮತ್ತು ಉದ್ದವು ಯಾವ ಅನುಪಾತದಲ್ಲಿದೆ?

43. ನಮ್ಮ ರಾಷ್ಟ್ರಧ್ವಜದ ಮಧ್ಯದಲ್ಲಿರುವ ಚಕ್ರವು ಏನನ್ನು ಸೂಚಿಸುತ್ತದೆ?

44. ನಮ್ಮ ರಾಷ್ಟ್ರಧ್ವಜದಲ್ಲಿ ನಿಮಗೆ ಅತಿಹೆಚ್ಚು ಇಷ್ಟವಾದ ಬಣ್ಣಯಾವುದು ಏಕೆ?

45. ಯಾದಗಿರಿ ಸರ್ಕಾರಿ ಪ್ರೌಢಶಾಲೆಯ ಹತ್ತನೇ ತರಗತಿ 'ಬಿ' ವಿಭಾಗದಲ್ಲಿ ಓದುತ್ತಿರುವ ನೀವು ಸಂಗಮೇಶ/ ಸಾಕಮ್ಮ ಎಂದು ಭಾವಿಸಿ ಬೆಂಗಳೂರಿನ ಇಸ್ರೋ ಲೇ ಔಟ್‌ನಲ್ಲಿ ವಾಸವಾಗಿರುವ ನಿಮ್ಮ ಅಣ್ಣ ಸೋಮೇಶ್ವರನಿಗೆ ಕನ್ನಡ ಸಾಹಿತ್ಯ ಪರಿಷತ್‌ನ ಪುಸ್ತಕ ಮಳಿಗೆಯಿಂದ ಒಳ್ಳೆಯ ಪುಸ್ತಕಗಳನ್ನು ತರುವಂತೆ ತಿಳಿಸಿ ಪತ್ರ ಬರೆಯಿರಿ.

**ಅಥವಾ**

ತಿಪಟೂರಿನ ನೀಲಕಂಠಸ್ವಾಮಿ ಸ್ಮಾರಕ ಪ್ರೌಢಶಾಲೆಯ ಹತ್ತನೇ ತರಗತಿಯಲ್ಲಿ ಓದುತ್ತಿರುವ ನೀವು ಪ್ರತ್ಯೂಷ / ಪ್ರಜ್ವಲ್ ಎಂದು ಭಾವಿಸಿ ದೂರದರ್ಶನದವರು ಬೆಂಗಳೂರಿನಲ್ಲಿ ನಡೆಸುತ್ತಿರುವ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಲು ಎರಡುದಿನ ರಜೆಯನ್ನು ಕೊಡಬೇಕೆಂದು ಕೋರಿ ಶಾಲಾ ಮುಖ್ಯೋಪಾಧ್ಯಾಯರಿಗೆ ರಜಾ ಚೀಟಿಯನ್ನು ಬರೆಯಿರಿ.

1X4=4

46. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** 1X4=4

- ಸ್ವಚ್ಛತಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಪಾತ್ರ.
- ರಾಷ್ಟ್ರೀಯ ಹಬ್ಬಗಳ ಪ್ರಾಮುಖ್ಯತೆ
- ಹವ್ಯಾಸಗಳ ಮಹತ್ವ.

******************